# ಬೋಧನೆ/ಕಲಿಕೆಯ ಪ್ರಕ್ರಿಯೆಯಲ್ಲಿ ಹಿಮ್ಮಾಹಿತಿಯ ಮಹತ್ವ

- ಟಿ. ಶ್ರೀಮತಿ ವೆಂಕಟಲಕ್ಷ್ಮೀ ಮತ್ತು ಚಂದ್ರೇಯೀ ಸರ್ಕಾರ್ ಮಿತ್ರ

**ಪರಿಚಯ**

ಈ ಲೇಖನವು ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಸುಧಾರಿಸುವ ಸಾಧನವಾಗಿ ಹಿಮ್ಮಾಹಿತಿಯ ಮಹತ್ವದತ್ತ ಗಮನವನ್ನು ಕೇಂದ್ರೀಕರಿಸುತ್ತದೆ. ಶಾಲೆಯಲ್ಲಿ ಯಾವುದೇ ರೂಪದ ನಿರ್ವಹಣೆಯು (ಮೌಖಿಕ ಮತ್ತು ಲಿಖಿತ ಎರಡೂ) ಆರಂಭವಾದ ಕೂಡಲೇ ಆ ವಿದ್ಯಾರ್ಥಿಯ ಮೌಲ್ಯಮಾಪನ ಪ್ರಾರಂಭವಾಗುತ್ತದೆ. ಈ ಮೌಲ್ಯಮಾಪನವು ತರಗತಿಯ ಮಟ್ಟದ ಚಿಕ್ಕ ಘಟಕ ಪರೀಕ್ಷೆಗಳು, ತ್ರೈಮಾಸಿಕ ಮತ್ತು ಅರ್ಧ ವಾರ್ಷಿಕ (ವಿವಿಧ ರೂಪದ ರಚನಾತ್ಮಕ ಮೌಲ್ಯಮಾಪನಗಳು) ಅಥವಾ ಅಂತಿಮ ಪರೀಕ್ಷೆಗಳ (ಸಂಕಲನಾತ್ಮಕ ಮೌಲ್ಯಮಾಪನಗಳು) ಮೂಲಕ ನಡೆಯುತ್ತದೆ. ಎಲ್ಲಾ ವಿದ್ಯಾರ್ಥಿಗಳು ತಮ್ಮ ಕಾರ್ಯಕ್ಷಮತೆಯಲ್ಲಿ ಯಶಸ್ವಿಯಾಗಲು ಏಕೆ ವಿಫಲರಾಗುತ್ತಾರೆ ಮತ್ತು ಶಿಕ್ಷಕರ ಹಿಮ್ಮಾಹಿತಿಯು ಅಂತಹ ವಿದ್ಯಾರ್ಥಿಗಳಿಗೆ ಹೆಚ್ಚು ಅಪೇಕ್ಷಣೀಯ ಕಾರ್ಯಕ್ಷಮತೆಯತ್ತ ಸಾಗಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕೆಲವು ವಿಷಯಗಳನ್ನು ನಾವು ನೋಡೋಣ.

**ಕಲಿಕೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವಿಕೆ - ಒಂದು ನೈಜ ಸವಾಲು**

ಕಾಲಾನುಕಾಲದಿಂದಲೂ ಕಷ್ಟಕರ ಪರಿಕಲ್ಪನೆಯಾಗಿಯೇ ಉಳಿದಿರುವ ಕಲಿಕೆಯ ಪ್ರಕ್ರಿಯೆಯ ಬಗೆಗಿನ ಸೂಕ್ತ ತಿಳುವಳಿಕೆಯು ಶಿಕ್ಷಕರು ಮತ್ತು ಬೋಧಕರಿಗೆ ಇಂದಿಗೂ ನಿಗೂಢವೇ ಆಗಿದೆ. ಬೋಧನೆಯಲ್ಲಿ ಸಾಮಾನ್ಯವಾಗಿ ಎರಡು ಸಮಸ್ಯೆಗಳಿರುತ್ತವೆ - ಮೊದಲನೆಯದಾಗಿ, ನಾವು ಬೋಧನೆಯನ್ನು ಯೋಜಿಸುತ್ತೇವೆ, ಗಮನಿಸುತ್ತೇವೆ ಮತ್ತು ನಿಯಂತ್ರಿಸುತ್ತೇವೆ. ಆದರೆ ಕಲಿಕೆಯಲ್ಲಿ ಅದೇ ರೀತಿ ಮಾಡಲು ಸಾಧ್ಯವಿಲ್ಲ. ಇದಕ್ಕೆ ಭಾಗಶಃ ಕಾರಣವೆಂದರೆ ಕಲಿಕೆಯು ನಮ್ಮ ಕೈಯಲ್ಲಿಲ್ಲ. ಕಲಿಕೆ ಎಂದರೆ ದೃಷ್ಟಿಕೋನವೂ ಅಲ್ಲ. ಶಿಕ್ಷಕರಾದ ನಮಗೇ ಅದು ಯಾವಾಗ ಸಂಭವಿಸುತ್ತದೆ ಎಂಬುದು ತಿಳಿದಿಲ್ಲ. ಇದು ವಿಶೇಷವಾಗಿ ಯಾವುದೇ ಭಾಷಾ ಬೋಧನೆಗೆ ಅನ್ವಯಿಸುತ್ತದೆ. ಏಕೆಂದರೆ ಇಲ್ಲಿ ಕೌಶಲ್ಯಗಳು ಅಭಿವೃದ್ಧಿ ಆಗುತ್ತಿರುತ್ತವೆ. ಆದಾಗ್ಯೂ, ಕಲಿಕೆಯು ಸಂಭವಿಸುವುದನ್ನು ನೋಡಲಾಗದಿದ್ದರೂ, ಕಲಿಕೆಯ ಫಲಿತಾಂಶವನ್ನು ನಾವು ನೋಡಬಹುದು. ಅಂದರೆ ನಾವು ಪ್ರಕ್ರಿಯೆಯನ್ನು ನೋಡಲಾಗುವುದಿಲ್ಲ ಆದರೆ ಫಲಿತವನ್ನು ನೋಡಬಹುದು. ಯಾರಾದರೂ ಇಂದು ಏನನ್ನಾದರೂ ಮಾಡಲು ಪ್ರಯತ್ನಿಸಿ ವಿಫಲವಾದರೆ ಮತ್ತು ಸುಮಾರು ಆರು ಪ್ರಯತ್ನಗಳ ನಂತರ, ಅವರು ಅದನ್ನು ಕಲಿಯುವುದರಲ್ಲಿ ಯಶಸ್ವಿಯಾದರೆ, ಕಲಿಯುವವರು ಅದನ್ನು ಮಾಡಲು ಕಲಿತಿದ್ದಾರೆ ಎಂದು ಹೇಳಬಹುದು. ಕಲಿಯುವವರು ನಿನ್ನೆ ಏನನ್ನು ಮಾಡಲು ಸಾಧ್ಯವಾಗಿರಲಿಲ್ಲವೋ ಅದನ್ನು ಈಗ ಮಾಡಲು ಸಾಧ್ಯವಾಗಿದೆ. ಎಷ್ಟು ಕಲಿತಿದ್ದಾರೆ ಎಂಬುದು ಸಮಸ್ಯೆಯಲ್ಲ, ಆದರೆ ವಿಷಯಗಳನ್ನು ಕಲಿಯಲಾಗುತ್ತಿದೆ ಎಂಬುದು ಮುಖ್ಯವಾಗುತ್ತದೆ. ಭಾರತದಲ್ಲಿ, ಕಲಿಯುವವರು ನಿಧಾನವಾಗಿ ಪ್ರಗತಿ ಸಾಧಿಸುವ ಮೂಲಕ ವಸ್ತುತಃ ಕಲಿಯುತ್ತಿರುತ್ತಾರೆ ಎಂಬುದನ್ನು ಒಪ್ಪಿಕೊಳ್ಳಲು ನಾವು ನಿರಾಕರಿಸುತ್ತೇವೆ.

ವಾಡಿಕೆಯ ತರಗತಿಯು ಕಲಿಯುವವರ ಒಂದು ಗುಂಪು, ಗುಂಪಿಗೆ ಕಲಿಸುವ ಶಿಕ್ಷಕರು ಮತ್ತು ಒಂದು ನಿರ್ದಿಷ್ಟ ಪಾಠದಿಂದ ಕೂಡಿರುತ್ತದೆ. ಕಲಿಯುವ ಎಲ್ಲರೂ ಒಂದೇ ಸಮಯದಲ್ಲಿ ಕಲಿಯುವುದಿಲ್ಲ, ಅವರು ಒಂದು ವಿಷಯವನ್ನು

ಒಂದೇ ವೇಗದಲ್ಲಿ ಕಲಿಯುವುದಿಲ್ಲ. ಕಲಿಯುವ ಕೆಲವರು ವೇಗವಾಗಿ ಕಲಿಯುತ್ತಾರೆ, ಇನ್ನೂ ಕೆಲವರು ನಿಧಾನವಾಗಿ ಕಲಿಯುತ್ತಾರೆ. ಇದು ಅಸಮವಾದುದಾಗಿದೆ. ಬೋಧನೆ ಏಕರೂಪವಾಗಿರುತ್ತದೆ ಆದರೆ ಕಲಿಕೆ ಏಕರೂಪವಾಗಿ ಇರುವುದಿಲ್ಲ.

**ಪರಿಶೀಲನೆಗಳ ಕುರಿತು**

ಆದ್ದರಿಂದ ಕಲಿಕೆಯನ್ನು ಮೌಲ್ಯಮಾಪನ ಮಾಡಲು ನಾವು ಫಲಿತಾಂಶಕ್ಕಾಗಿ ಕಾಯಬೇಕು ಎಂಬುದನ್ನು ಸಮರ್ಥಿಸಬಹುದು. ಇಲ್ಲಿ, ಫಲಿತಾಂಶವೆಂದು ನಾವು ಮೌಲ್ಯೀಕರಣಗಳನ್ನು ಉಲ್ಲೇಖಿಸುತ್ತೇವೆ.

ಸ್ಯಾಲಿ ಬ್ರೌನ್ (2005) ಪ್ರಕಾರ: "ಮೌಲ್ಯಮಾಪನವು ನಮ್ಮ ವಿದ್ಯಾರ್ಥಿಗಳ ಕಲಿಕೆಗೆ ಸಹಾಯ ಮಾಡಲು ಬಹುಶಃ ನಾವು ಮಾಡಬಹುದಾದ ಪ್ರಮುಖ ಸಂಗತಿಯಾಗಿದೆ. ನಾವು ಅದನ್ನು ಇಷ್ಟಪಡದಿರಬಹುದು, ಆದರೆ ವಿದ್ಯಾರ್ಥಿಗಳು ನಮ್ಮ ಬೋಧನೆಯನ್ನು ನಿರ್ಲಕ್ಷಿಸಬಹುದು ಮತ್ತು ನಿರ್ಲಕ್ಷಿಸುತ್ತಾರೆ; ಅವರು ಅರ್ಹತೆಯನ್ನು ಪಡೆಯಲು ಬಯಸಿದರೆ, ನಾವು ವಿನ್ಯಾಸಗೊಳಿಸುವ ಮತ್ತು ಕಾರ್ಯಗತಗೊಳಿಸುವ ಮೌಲ್ಯಮಾಪನ ಪ್ರಕ್ರಿಯೆಗಳಲ್ಲಿ ಅವರು ಭಾಗವಹಿಸಲೇಬೇಕಾಗುತ್ತದೆ."

ಆದ್ದರಿಂದ, ಕಲಿಕೆಗೆ ಅಡ್ಡಿಯಾಗುವ ಬದಲು ಮೌಲ್ಯಮಾಪನ ಪ್ರಕ್ರಿಯೆಯು ಯಾವ ರೀತಿ ಸಹಾಯಕ್ಕೆ ಬರುತ್ತದೆ ಎಂಬುದನ್ನು ನೋಡುವುದು ಮುಖ್ಯವಾಗುತ್ತದೆ. ಶೈಕ್ಷಣಿಕ ವ್ಯವಸ್ಥೆಯಲ್ಲಿನ ಎರಡು ರೀತಿಯ ಮೌಲ್ಯಮಾಪನಗಳೆಂದರೆ ರಚನಾತ್ಮಕ ಮತ್ತು ಸಂಕಲನಾತ್ಮಕ ವಿಧಗಳು.

ದತ್ತಾಂಶ ಅಥವಾ ಮಾಹಿತಿ ಸಂಗ್ರಹಣೆ ಪ್ರಕ್ರಿಯೆಯಲ್ಲಿ ಸಂಕಲನಾತ್ಮಕ ಮೌಲ್ಯಮಾಪನವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಒಂದು ಸೆಮಿಸ್ಟರ್ ಅಥವಾ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಕಲಿಯುವವರ ಅಂತಿಮ ಪ್ರಗತಿಯ ಮಾಹಿತಿಯನ್ನು ನಮಗೆ ಒದಗಿಸುವ ಸಾಧನವು ಇದಾಗಿದೆ. ಕಲಿಯುವವರು ಮುಂದಿನ ಹಂತಕ್ಕೆ ಹೋಗಲು ಸಮರ್ಥರೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸುವ ಉನ್ನತ ಮಟ್ಟದ ಪರೀಕ್ಷೆಗಳು ಸಂಕಲನಾತ್ಮಕ ಮೌಲ್ಯಮಾಪನಗಳಾಗಿವೆ. ಹೌದು, ನಂತರದ ಪರಿಣಾಮಗಳು ಸಮಸ್ಯಾತ್ಮಕವಾಗಿವೆ. ಏಕೆಂದರೆ ಪರೀಕ್ಷೆಗಳು ನಡೆದು ಮೌಲ್ಯಮಾಪನ ಪ್ರಕ್ರಿಯೆಯು ಪೂರ್ಣಗೊಂಡ ನಂತರ, ಕೆಲವು ವಿದ್ಯಾರ್ಥಿಗಳಿಗೆ 'ಎ' ಅಥವಾ 'ಬಿ' ಶ್ರೇಣಿಯನ್ನು ನೀಡಿ ಪುರಸ್ಕರಿಸಲಾಗುತ್ತದೆ. ಆದರೆ ಇತರರಿಗೆ ಅವರು 'ಡಿ' ಅಥವಾ 'ಇ' ಶ್ರೇಣಿಯನ್ನು ಗಳಿಸಿರುವ ವಿದ್ಯಾರ್ಥಿಗಳು ಎಂದು ಮತ್ತೆ ಮತ್ತೆ ನೆನಪಿಸಲಾಗುತ್ತದೆ. ವ್ಯಕ್ತಿಗಳನ್ನು ವರ್ಗೀಕರಿಸುವುದು ಎಂದರೆ ಕೆಲವರಿಗೆ ಅವರು ಯೋಗ್ಯರು ಮತ್ತು ವ್ಯವಸ್ಥೆಯ ದೃಷ್ಟಿಕೋನದಿಂದ ಅಪೇಕ್ಷಣೀಯರು ಮತ್ತು ಇತರರು ಯೋಗ್ಯರಲ್ಲ ಮತ್ತು ಅವರು ಅನಗತ್ಯ ಎಂದು ಬಿಂಬಿಸಿದಂತೆ.

ಸಂಕಲನಾತ್ಮಕ ಮೌಲ್ಯಮಾಪನವು ಅಂತಿಮ ಅಲಂಕರಣವಾಗಿದ್ದು, ಸುಧಾರಿಸಲು ಹೆಚ್ಚಿನ ಆಯ್ಕೆಗಳಿಲ್ಲ. ಆದಾಗ್ಯೂ, ಶಿಕ್ಷಕರು ಸಂಕಲನಾತ್ಮಕ ಪರೀಕ್ಷೆಗಳ ವಿನ್ಯಾಸದಲ್ಲಿ ಹೆಚ್ಚಿನ ಸಮಯವನ್ನು ಕಳೆಯುತ್ತಾರೆ ಎಂದು ಗಮನಿಸಲಾಗಿದೆ. ವಿದ್ಯಾರ್ಥಿಗಳು ಶ್ರೇಣಿಗಳನ್ನು ನೀಡದಿದ್ದರೂ ಕಲಿಯಬಹುದು. ಆದರೆ ರಚನಾತ್ಮಕ ಮೌಲ್ಯಮಾಪನ ಮತ್ತು ಅದರಿಂದ ಬರುವ ಹಿಮ್ಮಾಹಿತಿ ಇಲ್ಲದೇ ಕಲಿಯಲು ಸಾಧ್ಯವಿಲ್ಲ. ಆದ್ದರಿಂದ, ರಚನಾತ್ಮಕ ಮೌಲ್ಯಮಾಪನಗಳನ್ನು ಅಧ್ಯಯನದುದ್ದಕ್ಕೂ ಇರುವ ಪರೀಶೀಲನಾ ಅಂಶಗಳೆಂದು ಪರಿಗಣಿಸಬಹುದು.

*ರಚನಾತ್ಮಕ ಮೌಲ್ಯಮಾಪನಗಳು*

ಹಿಮ್ಮಾಹಿತಿಯು ಕಲಿಕೆಯ ಪ್ರಕ್ರಿಯೆಗೆ ಅವಿಭಾಜ್ಯವಾಗಿದೆ ಮತ್ತು ವಿದ್ಯಾರ್ಥಿಗಳು ಮೌಲ್ಯಮಾಪನಗಳಿಂದ, ಅದರಲ್ಲೂ ಹೆಚ್ಚಾಗಿ ರಚನಾತ್ಮಕ ಮೌಲ್ಯಮಾಪನಗಳಿಂದ ಪಡೆಯುವ ಮುಖ್ಯ ಪ್ರಯೋಜನಗಳಲ್ಲಿ ಒಂದೆನಿಸಿದೆ ಎಂಬುದು ಬೋಧನೆ ಮತ್ತು ಕಲಿಕೆಯ ಕ್ಷೇತ್ರದಲ್ಲಿ ಬಹಳ ಒಪ್ಪಿತವಾದ ಸಂಗತಿ. ರಚನಾತ್ಮಕ ಮೌಲ್ಯಮಾಪನಗಳು ಕಲಿಕೆಯಲ್ಲಿರುವ ಅಂತರವನ್ನು ಗುರುತಿಸಲು ಸಹಾಯ ಮಾಡುತ್ತವೆ. ಈ ಅಂತರವನ್ನು ಸಂಪೂರ್ಣವಾಗಿ ಮುಚ್ಚಲು ರಚನಾತ್ಮಕ ಪ್ರತಿಕ್ರಿಯೆಯಿಂದ ಸಾಧ್ಯವಾಗದಿದ್ದರೂ, ಅವುಗಳನ್ನು ತಿಳಿಸಲು ಮತ್ತು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ದುರದೃಷ್ಟವಶಾತ್, ಪಾಲ್ ಬ್ಲಾಕ್ ಮತ್ತು ಡೈಲನ್ ವಿಲಿಯಂ (1998) ನಡೆಸಿದ ಸಂಶೋಧನೆಯು ಉತ್ತಮ-ಗುಣಮಟ್ಟದ ರಚನಾತ್ಮಕ ಮೌಲ್ಯಮಾಪನವು ತರಗತಿಗಳಲ್ಲಿ ತುಲನಾತ್ಮಕವಾಗಿ ಅಪರೂಪವಾಗಿದೆ ಮತ್ತು ಹೆಚ್ಚಿನ ಶಿಕ್ಷಕರಿಗೆ ಅಂತಹ ಮೌಲ್ಯಮಾಪನದಲ್ಲಿ ಹೇಗೆ ತೊಡಗಿಸಿಕೊಳ್ಳಬೇಕೆಂದು ಚೆನ್ನಾಗಿ ತಿಳಿದಿಲ್ಲ ಎಂಬುದನ್ನು ತೋರಿಸುತ್ತದೆ. ಬಹುತೇಕ ತರಗತಿಯ ಪರೀಕ್ಷಣವು ಉರು ಹಚ್ಚುವುದನ್ನು ಮತ್ತು ತೋರ್ಕೆಯ (ಅಗಂಭೀರ) ಕಲಿಕೆಯನ್ನು ಪ್ರೋತ್ಸಾಹಿಸುತ್ತದೆ ಎಂದು ಅವರ ಮುಂದುವರಿದ ಅಧ್ಯಯನವು ಬಹಿರಂಗಪಡಿಸಿದೆ. ಶಿಕ್ಷಕರು ತಮ್ಮ ಸ್ವಂತ ಮೌಲ್ಯಮಾಪನ ಅಭ್ಯಾಸಗಳಲ್ಲಿ ಅವುಗಳ ಸೂಕ್ತತೆಯನ್ನು ಪರಿಶೀಲಿಸದೆಯೇ ಸಾಮಾನ್ಯವಾಗಿ ಪ್ರಮಾಣೀಕೃತ ಪರೀಕ್ಷೆಗಳನ್ನು ಪುನರಾವರ್ತಿಸುತ್ತಾರೆ. ಆದ್ದರಿಂದ ತಮ್ಮ ವಿದ್ಯಾರ್ಥಿಗಳ ಬಗ್ಗೆ ಅವರಿಗೆ ಸಾಕಷ್ಟು ಮಾಹಿತಿಯ ಕೊರತೆಯಿದೆ ಎಂಬುದು ಅಧ್ಯಯನದಿಂದ ತಿಳಿಯುತ್ತದೆ. ವಿದ್ಯಾರ್ಥಿಗಳ ಕೆಲಸದ ಕುರಿತು ಶಿಕ್ಷಕರ ಪ್ರತಿಕ್ರಿಯೆಯನ್ನು ನಾವು ಸಾಮಾನ್ಯವಾಗಿ 'ಹಿಮ್ಮಾಹಿತಿ', 'ತಿದ್ದುಪಡಿ' ಮತ್ತು ಕೆಲವೊಮ್ಮೆ 'ಶ್ರೇಣೀಕರಣ' ಎಂದು ಕರೆಯುತ್ತೇವೆ.

### ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಹಿಮ್ಮಾಹಿತಿ ಮತ್ತು ಅದರ ಅಗತ್ಯವನ್ನು ವ್ಯಾಖ್ಯಾನಿಸುವುದು

ವಿದ್ಯಾರ್ಥಿಗಳಿಗೆ ಅವರ ಕಾರ್ಯಕ್ಷಮತೆಯ ಬಗ್ಗೆ ನೀಡುವ ಮಾಹಿತಿಯನ್ನು ಹಿಮ್ಮಾಹಿತಿ ಎಂದು ವ್ಯಾಖ್ಯಾನಿಸಬಹುದು ಮತ್ತು ಅದು ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಪ್ರಮುಖ ಅಂಶವಾಗಿದೆ. ಉತ್ತಮವಾದ ವ್ಯಾಕರಣ ತಿದ್ದುಪಡಿಯಿಂದ ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಾರೆ ಎಂಬುದಕ್ಕೆ "ಸಾಕಷ್ಟು ಸಂಶೋಧನಾ ಪುರಾವೆಗಳು ಹರಿದು ಬರುತ್ತಿವೆ" ಎಂದು ಫೆರ್ರಿಸ್ (1999) ಹೇಳಿದ್ದಾರೆ. ಹಿಮ್ಮಾಹಿತಿಯನ್ನು ಕುರಿತ ಸಾಹಿತ್ಯವು ವ್ಯಾಕರಣ ತಿದ್ದುಪಡಿಯು ಅತ್ಯಂತ ಸಾಮಾನ್ಯ ರೂಢಿಯಾಗಿತ್ತು ಎಂಬ ಆತ್ಮವಿಶ್ವಾಸದ ಸಮರ್ಥನೆ ಮತ್ತು ಊಹೆಗಳಿಂದ ತುಂಬಿತ್ತು. ಹ್ಯಾಟಿ ಮತ್ತು ಟಿಂಪರ್ಲಿ (2007), ವಿದ್ಯಾರ್ಥಿಗಳು "ಕಾರ್ಯವೊಂದರ ಬಗ್ಗೆ ಮತ್ತು ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಹೇಗೆ ಮಾಡುವುದು ಎಂಬ ಮಾಹಿತಿಯನ್ನು ಕುರಿತ ಹಿಮ್ಮಾಹಿತಿಯನ್ನು (feedback)" ಪಡೆದುಕೊಂಡಾಗ ಅವರ ಕಲಿಕೆಯಲ್ಲಿ ಹೆಚ್ಚಿನ ಸುಧಾರಣೆ ಆಗುತ್ತದೆ ಮತ್ತು ಇದು ಕಲಿಕೆಯ ಗುರಿಗಳಿಗೆ ಸ್ಪಷ್ಟವಾಗಿ ಸಂಬಂಧಿಸಿದೆ ಎಂದು ಗುರುತಿಸುತ್ತಾರೆ. ಕಲಿಕೆಯ ಪ್ರಕ್ರಿಯೆಯಲ್ಲಿ ಇದರ ಪಾತ್ರವು, ವಿದ್ಯಾರ್ಥಿಗಳಿಗೆ ಅವರ ಕಲಿಕೆ ಮತ್ತು ಕಾರ್ಯಕ್ಷಮತೆಯನ್ನು ಎಲ್ಲಿ ಮತ್ತು ಹೇಗೆ ಸುಧಾರಿಸಬಹುದು ಎಂಬುದನ್ನು ತಿಳಿಸುವುದು. ಸ್ಯೂ ಸ್ವಾಫೀಲ್ಡ್ (2008) ಸೂಚಿಸುವಂತೆ, ಭವಿಷ್ಯದ ಕಾರ್ಯಕ್ಷಮತೆಯು ಹಿಂದಿನ ಕಾರ್ಯಕ್ಷಮತೆಯ ಬಗೆಗಿನ ಮಾಹಿತಿಯಿಂದ ಪ್ರಭಾವಿತವಾಗುತ್ತದೆ ಎಂಬ ಕಲ್ಪನೆಯು ಕಲಿಕೆಗೆ ಪ್ರಮುಖವಾದುದು. ಯಾವುದೇ ಬೋಧನಾ ಮಾದರಿಗೆ ಯೋಜಿತ ಕಲಿಕೆಯು ಪೂರ್ವಾಪೇಕ್ಷಿತವಾಗಿದೆ. ಆದ್ದರಿಂದ ಹಿಮ್ಮಾಹಿತಿಯನ್ನು ಒಂದು ವೃತ್ತಿಪರ ಚಟುವಟಿಕೆಯಾಗಿ ನೋಡಬೇಕು ಮತ್ತು ಶಿಕ್ಷಕರು ಅವರ ಬೋಧನಾ ವಿಧಾನಗಳ ಜೊತೆ ಕಲಿಕೆಯ

ಫಲಿತಾಂಶಗಳು ಹೇಗೆ ಬೆಸೆದುಕೊಂಡಿವೆ ಎಂಬುದನ್ನು ಕಂಡುಕೊಳ್ಳಲು ತಪ್ಪದೇ ಅದನ್ನು ನಿರ್ವಹಿಸಬೇಕು. ಶಿಕ್ಷಕರು ತಾವು ವಿದ್ಯಾರ್ಥಿಗಳಿಗೆ ಕಲಿಸುವುದು ಮಾತ್ರವಲ್ಲದೇ ಅವರಿಗೆ ಕಲಿಸಿದ ವಿಷಯಗಳ ಬಗ್ಗೆ ಪರೀಕ್ಷಿಸುವುದು ಮತ್ತು ಅವರ ಕಾರ್ಯಕ್ಷಮತೆಯ ಬಗ್ಗೆ ಹಿಮ್ಮಾಹಿತಿಯನ್ನು ನೀಡುವುದು ತಮ್ಮ ವೃತ್ತಿಯ ಭಾಗವೆಂದು ತಿಳಿದಿದ್ದಾರೆ.

**ಭಾರತದಲ್ಲಿ ಹಿಮ್ಮಾಹಿತಿಯ ಚಿತ್ರಣ**

ಭಾರತದಲ್ಲಿ ಹಿಮ್ಮಾಹಿತಿಯ ವಿಧಾನಗಳನ್ನು ಖಂಡಿತವಾಗಿಯೂ ಸುಧಾರಿಸಬೇಕಾಗಿದೆ. ಎಷ್ಟೋ ಬಾರಿ ಪ್ರತಿಕ್ರಿಯೆಯು ನಿಷ್ಪರಿಣಾಮಕಾರಿಯಾಗಿದೆ ಏಕೆಂದರೆ ಅದು ದೋಷಗಳನ್ನು ಮಾತ್ರ ಎತ್ತಿ ತೋರಿಸುತ್ತದೆ. ಆದರೆ ಅದರ ನಂತರದ ವಿವರಣೆಗಳನ್ನು ಒದಗಿಸಲು ವಿಫಲವಾಗುತ್ತದೆ. ಸಾಮಾನ್ಯವಾಗಿ ಶಿಕ್ಷಕರು ಹೆಚ್ಚಿನ ರಚನಾತ್ಮಕ ಮೌಲ್ಯಮಾಪನಗಳು ಅಥವಾ ವಿದ್ಯಾರ್ಥಿಗಳ ಲಿಖಿತ ಕಾರ್ಯಯೋಜನೆಯ ಕುರಿತು ವಿವರಣಾತ್ಮಕ ಹಿಮ್ಮಾಹಿತಿಯನ್ನು ನೀಡದೇ ಮೌಲ್ಯಮಾಪಕ (ತೀರ್ಪಿನ) ಹಿಮ್ಮಾಹಿತಿಯನ್ನು ನೀಡಲು ಪ್ರಯತ್ನಿಸುತ್ತಾರೆ. ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳಲ್ಲಿ ಶಿಕ್ಷಕರು ವಾಕ್ಯದಲ್ಲಿನ ಕಾಗುಣಿತ ಅಥವಾ ವ್ಯಾಕರಣ ದೋಷವನ್ನು ಸರಿಪಡಿಸುವಾಗ 'ಫ್ಲಿಕ್ ಅಂಡ್ ಟಿಕ್' (ಥಟ್ ಎಂದು ಸರಿ ಅಥವಾ ತಪ್ಪನ್ನು ಗುರುತಿಸುವುದು) ವಿಧಾನವನ್ನು ಅನುಸರಿಸಿದಲ್ಲಿ, ಅದನ್ನು ಸರಿ ಎಂದು ಪರಿಗಣಿಸಬಹುದು. ಆದರೆ ವಿದ್ಯಾರ್ಥಿಗಳು ಉನ್ನತ ತರಗತಿಗಳಿಗೆ ಹೋದಂತೆ ಅವರ ಬರವಣಿಗೆಯ ಪ್ರಮಾಣವೂ ಹೆಚ್ಚಾಗುತ್ತದೆ. ಹೆಚ್ಚಿನ ಮೌಲ್ಯಮಾಪನಗಳು ವಿದ್ಯಾರ್ಥಿಗಳ ಬರವಣಿಗೆಯ ಕೌಶಲ್ಯವನ್ನು ಮೌಲ್ಯಮಾಪನ ಮಾಡುತ್ತವೆ. "ಪರೀಕ್ಷಾ ಕೊಠಡಿಯ ಕಲ್ಪನೆ, ಪ್ರಶ್ನೆಗಳನ್ನೊಳಗೊಂಡ ಪ್ರಶ್ನೆಪತ್ರಿಕೆ, ಗಡಿಯಾರದೆದುರಿನ ಹತಾಶ ಗೀಚುವಿಕೆ" ಎಂದು ಮೆಕ್‌ನಮರಾ (2000) ನೆನಪಿಸಿಕೊಳ್ಳುತ್ತಾರೆ. ಕಲಿಯುವವರಿಗೆ ನಿರ್ವಹಿಸಲು ಸಾಧ್ಯವಾಗದ್ದಕ್ಕೆ ದಂಡ ವಿಧಿಸಲು ಕಾಯುವ ಪ್ರಕ್ರಿಯೆಯಾಗಿಯೇ ಪರೀಕ್ಷೆಯು ಹೇಗೆ ಕಾಲಾನುಕಾಲದಿಂದಲೂ ಉಳಿದುಕೊಂಡು ಬಂದಿದೆ ಎಂಬುದನ್ನೂ ಅವರು ತೋರಿಸಿದ್ದಾರೆ. ಅದು ಕೇವಲ ಅವನು/ಅವಳು ಏನು ಮಾಡಲು ಸಾಧ್ಯವಾಯಿತು ಎಂಬುದನ್ನು ಪ್ರೋತ್ಸಾಹಿಸಬಯಸುತ್ತದೆ.

ದುರದೃಷ್ಟವಶಾತ್, ಭಾರತದಲ್ಲಿ ಇದು ಇನ್ನೂ ಕರುಣಾಜನಕ ಸ್ಥಿತಿಯಾಗಿ ಮುಂದುವರೆದಿದೆ. ಇಲ್ಲಿ ಕಲಿಯುವವರ ಸಣ್ಣ ತಪ್ಪುಗಳಿಗಾಗಿ ಅಥವಾ ಹೋಮ್‌ವರ್ಕ ಮಾಡದೆ ತರಗತಿಗೆ ಹಾಜರಾಗಿದ್ದಕ್ಕಾಗಿ ತೀವ್ರವಾಗಿ ಶಿಕ್ಷಿಸಲಾಗುತ್ತದೆ. ವಿಧಿಸಿದ ಕಾರ್ಯವನ್ನು ಅಪೇಕ್ಷಣೀಯವಾಗಿ ನಿರ್ವಹಿಸದ ಕಾರಣಕ್ಕಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳಲ್ಲಿ ಕಲಿಯುವ ಮಕ್ಕಳು ಶಿಕ್ಷಕರಿಂದ ಹೇಗೆ ದೈಹಿಕವಾಗಿ ಕಿರುಕುಳಕ್ಕೆ ಒಳಗಾಗುತ್ತಾರೆ ಎಂಬುದರ ಕುರಿತ ವರದಿಗಳು ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳಲ್ಲಿ ತುಂಬಿ ತುಳುಕುತ್ತಿರುತ್ತವೆ. ಕೆಲವು ಸಂದರ್ಭಗಳಲ್ಲಿ ಶಿಕ್ಷೆಯು ಎಷ್ಟು ಕಠಿಣವಾಗಿರುತ್ತದೆಂದರೆ, ಕೆಲವು ವಿದ್ಯಾರ್ಥಿಗಳು ದೃಷ್ಟಿ ಅಥವಾ ಶ್ರವಣಶಕ್ತಿಯನ್ನೇ ಕಳೆದುಕೊಂಡಿದ್ದಾರೆ. ದೈಹಿಕ ದೌರ್ಜನ್ಯದ ಈ ವರದಿಗಳು ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳಿಂದಲೇ ಹೆಚ್ಚಾಗಿ ಬಂದಿವೆ ಎಂಬುದು ಸತ್ಯ.

ಈ ಎಲ್ಲಾ ದತ್ತಾಂಶಗಳಿರುವಾಗ, ವಿದ್ಯಾರ್ಥಿಗಳನ್ನು ರಚನಾತ್ಮಕ ಮೌಲ್ಯಮಾಪನಗಳು ಮತ್ತು ಹಿಮ್ಮಾಹಿತಿಯೊಂದಿಗೆ ಹೇಗೆ ತೊಡಗಿಸಿಕೊಳ್ಳುವುದು ಮತ್ತು ವಿದ್ಯಾರ್ಥಿಗಳಲ್ಲಿ ಉನ್ನತ ಮಟ್ಟದ ಕಲಿಕೆ ಸಾಧ್ಯವಾಗುವಂತೆ ಮಾಡಲು ಹಿಮ್ಮಾಹಿತಿಯನ್ನು ಹೇಗೆ ಸುಧಾರಿಸಬಹುದು ಎಂಬುದನ್ನು ಆಲೋಚಿಸುವ ಅಗತ್ಯವನ್ನು ಪರಿಗಣಿಸುವುದು ಮುಖ್ಯವಾಗುತ್ತದೆ.

ಭಾರತದ ಎಲ್ಲಾ ಭಾಷೆಗಳ ಶೇಕಡಾ ಎಪ್ಪತ್ತೈದರಷ್ಟು ಮೌಲ್ಯಮಾಪನಗಳು ಮತ್ತು ಪರೀಕ್ಷೆಗಳು, ಬರವಣಿಗೆಯನ್ನು ಪರಿಶೀಲಿಸುತ್ತವೆ. ಬರವಣಿಗೆಯ ಬಗ್ಗೆ ಹಿಮ್ಮಾಹಿತಿಯನ್ನು ನೀಡುವುದು ಮುಖ್ಯವಾಗುತ್ತದೆ. ಆದ್ದರಿಂದ ಬರವಣಿಗೆಯ ಬೋಧನೆ ಮತ್ತು ಬರವಣಿಗೆಯ ಕಲಿಕೆಗೆ, ಸಂಬಂಧಿಸಿದಂತೆ ಬರವಣಿಗೆಯನ್ನು ಕುರಿತ ಹಿಮ್ಮಾಹಿತಿಯು ನಿರ್ಣಾಯಕವಾಗುತ್ತದೆ. ದ್ವಿತೀಯ ಭಾಷಾ ಬರವಣಿಗೆಯಲ್ಲಿನ ಹಿಮ್ಮಾಹಿತಿಯು ವ್ಯಾಕರಣ, ಶಬ್ದಾವಳಿ, ವಿಷಯ, ವಿಚಾರಗಳ ಸುಸಂಬದ್ಧತೆ ಮತ್ತು ಹೊಂದಿಕೆ ಮುಂತಾದ ಬರವಣಿಗೆಗೆ ಸಂಬಂಧಿಸಿದ ಭಾಷಾ ಅಂಶಗಳು ಮತ್ತು ಕೌಶಲ್ಯಗಳ ಬಹುತೇಕ ಎಲ್ಲಾ ಅಂಶಗಳನ್ನೂ ಕೇಂದ್ರೀಕರಿಸುತ್ತದೆ. ಬರವಣಿಗೆಯು ಒಂದು ಪ್ರಮುಖವಾದ ಕೌಶಲ್ಯ ಮತ್ತು ವಿಚಾರಗಳನ್ನು ಅಭಿವೃದ್ಧಿಪಡಿಸುವ ಒಂದು ಮಾರ್ಗವಾಗಿದೆ. ಅದರಲ್ಲೂ ವಿಶೇಷವಾಗಿ ಇಂಜಿನಿಯರಿಂಗ್ ಪದವೀಧರರರಿಗೆ ಇದು ಪ್ರಮುಖ ಸಾಧನವಾಗಿದೆ. ಏಕೆಂದರೆ ಭಾರತದಲ್ಲಿ ಕಾಲೇಜು ಯಾ ವಿಶ್ವವಿದ್ಯಾನಿಲಯದ ಶಿಕ್ಷಣವು ಇಂಗ್ಲಿಷಿನಲ್ಲಿದ್ದು, ವಿದ್ಯಾರ್ಥಿಗಳು ಯಾವುದೇ ರೀತಿಯ ಶೈಕ್ಷಣಿಕ ಹಿನ್ನೆಲೆಯನಗನು ಹೊಂದಿದ್ದಾಗ್ಯೂ, ನಿಯತ ಕಾರ್ಯಗಳನ್ನು(assignment) ಸಲ್ಲಿಸಲು ಮತ್ತು ಪರೀಕ್ಷೆಯನ್ನು ಬರೆಯಲು ಇಂಗ್ಲಿಷ್ ಭಾಷೆಯನ್ನೇ ಅವರಿಂದ ನಿರೀಕ್ಷಿಸಲಾಗುತ್ತದೆ. ವಿದ್ಯಾರ್ಥಿಗಳ ಬರವಣಿಗೆಯನ್ನು ಕುರಿತ ಹಿಮ್ಮಾಹಿತಿಯ ಪ್ರಮಾಣವನ್ನು ಭಾಷಾ ದೋಷಗಳಿಂದ ಮೊದಲ್ಗೊಂಡು, ಚರ್ಚಿಸಿದ ಅಂಶಗಳ ಪ್ರಸ್ತುತತೆ ಮತ್ತು ಸುಸಂಬದ್ಧತೆಯಂತಹ ಬರವಣಿಗೆಯ ಹೆಚ್ಚು ಗಂಭೀರವಾದ ವಿಷಯಗಳವರೆಗೆ ನಿರಂತರವಾಗಿ ಸ್ಥಿತಗೊಳಿಸಬಹುದು. ಶಿಕ್ಷಕರು ಕೇವಲ ವ್ಯಾಕರಣ ದೋಷಗಳನ್ನು ಮಾತ್ರ ಪರಿಶೀಲಿಸುವುದಲ್ಲ. ಬರವಣಿಗೆಯ ವಿಷಯವನ್ನು ಸಹ ಗಮನಿಸಬೇಕು. ವ್ಯಾಕರಣ ದೋಷಗಳು ವಿದ್ಯಾರ್ಥಿಗಳ ಬರವಣಿಗೆಯನ್ನು ಅರ್ಥಮಾಡಿಕೊಳ್ಳಲು ಅಡ್ಡಿಯಾಗಬಹುದು, ಆದರೆ ಹಲವು ಬಾರಿ ಭಾಷಾ ಶಿಕ್ಷಕರು ವ್ಯಾಕರಣವನ್ನು ಸರಿಪಡಿಸುವಲ್ಲಿ ಮಾತ್ರ ಸಂತೃಪ್ತರಾಗುತ್ತಾರೆ ಮತ್ತು ಬರವಣಿಗೆಯ ಇತರ ಅಂಶಗಳನ್ನು ನೋಡದೇ ವ್ಯಾಕರಣವನ್ನು ಕುರಿತೇ ಹಿಮ್ಮಾಹಿತಿಯನ್ನು ನೀಡುತ್ತಾರೆ. ಆ ಇತರೆ ಅಂಶಗಳು, ವಿದ್ಯಾರ್ಥಿಗಳು ಕೇವಲ ಒಂದಿಷ್ಟು ವ್ಯಾಕರಣ-ಬದ್ಧ ವಾಕ್ಯಗಳನ್ನು ಮಾತ್ರ ರಚಿಸುವ ಬದಲಿಗೆ, ಪಠ್ಯಗಳನ್ನು ಬರೆಯುವುದನ್ನು ಸಾಧ್ಯವಾಗಿಸುವಂತಿರುತ್ತವೆ.

ಈ ರೀತಿಯ ತಿದ್ದುಪಡಿ ಮಾಡುವ ವಿಧಾನವನ್ನು ನಕಾರಾತ್ಮಕವೆಂದು ಪರಿಗಣಿಸಬಹುದು. ಏಕೆಂದರೆ ತನ್ನ ಬರವಣಿಗೆಯಲ್ಲಿ ಬಹಳಷ್ಟು ಕೆಂಪು ಗುರುತುಗಳನ್ನು ನೋಡಿದ ಬಳಿಕ ಯಾವ ವಿದ್ಯಾರ್ಥಿಯೇ ಆಗಲಿ ಬೇಸರಗೊಳ್ಳುವುದು ಸಹಜ. ತಮ್ಮ ವ್ಯಾಕರಣ ದೋಷಕ್ಕಾಗಿ 'ಫ್ಲಿಕ್ ಅಂಡ್ ಟಿಕ್ಸ್'ಗಳ ಜೊತೆಗೆ ವಿದ್ಯಾರ್ಥಿಯು ಹಿಮ್ಮಾಹಿತಿಯನ್ನೂ ಪಡೆಯುವುದು ಹೆಚ್ಚು ರಚನಾತ್ಮಕ ಎನಿಸುತ್ತದೆ. ಭಾರತದಲ್ಲಿ ಈ ಹಿಂದೆ, ಅದರಲ್ಲೂ ವಿಶೇಷವಾಗಿ ಶಾಲಾ ಹಂತದಲ್ಲಿನ 'ಲಿಖಿತ ಹಿಮ್ಮಾಹಿತಿ' ಎಂಬುದು, ವಿದ್ಯಾರ್ಥಿಗಳು ಕೆಲಸ ಮಾಡಿದ್ದಾರೆಯೇ ಇಲ್ಲವೇ ಎಂದು ಪರಿಶೀಲಿಸಲು ಶಿಕ್ಷಕರು ಅವರ ಪುಸ್ತಕದ ಹಾಳೆಗಳನ್ನು ತಿರುವಿಹಾಕುವ, ಮತ್ತು ವ್ಯವಸ್ಥಾಪಕರಿಗೆ, ಸಹ ಶಿಕ್ಷಕರಿಗೆ, ಪೋಷಕರಿಗೆ ಮತ್ತು ಮಕ್ಕಳಿಗೆ 'ಗುರುತು' ಮಾಡಿದ್ದೇವೆ ಎಂಬುದಕ್ಕೆ ಸಾಕ್ಷ್ಯ ನೀಡಲು ಎಂಬಂತೆ ಅಲ್ಲೊಂದು ಇಲ್ಲೊಂದು ಟಿಕ್ ಮಾಡುವ 'ಫ್ಲಿಕ್ ಅಂಡ್ ಟಿಕ್' ಪ್ರಕ್ರಿಯೆಯ ಒಂದು ಪ್ರಕಾರವೇ ಆಗಿದೆ. 'ಫ್ಲಿಕ್ ಅಂಡ್ ಟಿಕ್' ಮತ್ತು 'ಎಲ್ಲವನ್ನೂ ಕೆಂಪು ಪೆನ್‌ನಲ್ಲಿ ಗುರುತು ಮಾಡುವ' - ಎರಡೂ ವಿಧಾನಗಳಲ್ಲಿ ಹಲವೊಮ್ಮೆ ಕೊನೆಯಲ್ಲಿ ವಿದ್ಯಾರ್ಥಿಯ ಕೆಲಸವನ್ನು ಕುರಿತ ಸಂಖ್ಯಾತ್ಮಕ ಅಂಕ ಅಥವಾ ಶ್ರೇಣಿಯನ್ನು ಮತ್ತು ಅಭಿಪ್ರಾಯವೊಂದನ್ನು ನೀಡಲಾಗುತ್ತಿತ್ತು (ಸ್ವಾಫೀಲ್ಡ್, 2008). ಇದು ಭಾರತದ ವಿದ್ಯಾರ್ಥಿಗಳ ನಿಯತ ಕಾರ್ಯಗಳು ಮತ್ತು ಮೌಲ್ಯಮಾಪನದ ಹಾಳೆಗಳಲ್ಲಿ ಕಂಡುಬರುವ ಅತ್ಯಂತ ಸಾಮಾನ್ಯ ಅಭ್ಯಾಸವಾಗಿದೆ.

**ಉಪಸಂಹಾರ**

ಹುಡುಕಾಟವು, ಹಿಮ್ಮಾಹಿತಿಯನ್ನು ಪರಿಣಾಮಕಾರಿಯಾಗಿ ಮಾಡಲು ಏನು ಮಾಡಬಹುದು ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ತರಗತಿಯ ದೊಡ್ಡ ಗಾತ್ರದ ಕಾರಣದಿಂದಾಗಿ ಪ್ರತಿ ವಿದ್ಯಾರ್ಥಿಯ ಕಾರ್ಯಕ್ಷಮತೆಯ ಕುರಿತು ದೀರ್ಘ ಅಭಿಪ್ರಾಯಗಳನ್ನು ರಚಿಸುವುದು ಪ್ರಾಯೋಗಿಕವಾಗಿ ಸಾಧ್ಯವಿಲ್ಲ. ಹಾಗಾಗಿ ಅದನ್ನು ಪರಿಣಾಮಕಾರಿಯಾಗಿ ಮಾಡುವ ಯಾವುದೇ ಪ್ರಯತ್ನವು, ಅಂತರಗಳನ್ನು ಅರ್ಥಮಾಡಿಕೊಂಡು ಅದಕ್ಕೆ ಅನುಗುಣವಾಗಿ ಅವುಗಳನ್ನು ಪರಿಹರಿಸಲು ಸಹಾಯ ಮಾಡುವ ವಿಶ್ಲೇಷಣಾತ್ಮಕ ಪರೀಕ್ಷೆಯ ಫಲಿತಾಂಶಗಳನ್ನು ಪ್ರಧಾನವಾಗಿ ಅವಲಂಬಿಸಿರುತ್ತದೆ.

ಶಿಕ್ಷಕರು ನೀಡುವ ಅಭಿಪ್ರಾಯವು ವಿದ್ಯಾರ್ಥಿಯ ಮನಸ್ಸಿನ ಮೇಲೆ ದೀರ್ಘಪರಿಣಾಮವನ್ನು ಬೀರುತ್ತದೆ. ನಕಾರಾತ್ಮಕ ಅಥವಾ ಏಕಮುಖಿ ತೀರ್ಪಿನ ಹಿಮ್ಮಾಹಿತಿಗಿಂತ ಹೆಚ್ಚು ಹಾನಿಕಾರಕ ಮತ್ತು ವಿದ್ಯಾರ್ಥಿಯ ಜೀವಕ್ಕೆ ಆಪತ್ತು ತರುವ ವಿಷಯ ಬೇರೊಂದಿಲ್ಲ. ಆದ್ದರಿಂದ ಇಪ್ಪತ್ತೊಂದನೇ ಶತಮಾನದಲ್ಲಿ ಶಿಕ್ಷಕರಾಗಿ, ತರಗತಿಯಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯು ಇತರರಿಗಿಂತ ಹಲವು ರೀತಿಗಳಲ್ಲಿ ಭಿನ್ನವಾಗಿದ್ದು, ಪ್ರತಿಯೊಬ್ಬರಿಗೂ ವಿಭಿನ್ನ ರೀತಿಯ ಹಿಮ್ಮಾಹಿತಿಯ ಅಗತ್ಯವಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಆದ್ದರಿಂದ ಮಾನವವಾದಿ ಮತ್ತು ನೈತಿಕ ಬೋಧನೆಯನ್ನು ಹಿಮ್ಮಾಹಿತಿಯು ಹೇಗೆ ಖಾತರಿಪಡಿಸುತ್ತದೆ ಎಂಬುದನ್ನು ಶಿಕ್ಷಕರು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಹೆಚ್ಚು ಮಾನವೀಯ ದೃಷ್ಟಿಕೋನವನ್ನು ಹೊಂದಿರುವ ಶಿಕ್ಷಕರು ವಿದ್ಯಾರ್ಥಿಗಳಿಗೆ ಅವರ ತರಗತಿಯ ನಿಯತ ಕಾರ್ಯಗಳು ಮತ್ತು ಮೌಲ್ಯಮಾಪನಗಳ ಕಾರ್ಯಕ್ಷಮತೆಯ ಕುರಿತು ಹಿಮ್ಮಾಹಿತಿಯನ್ನು ನೀಡುವುದು, ತರಗತಿಯಲ್ಲಿ ಉತ್ತೇಜಕ ವಾತಾವರಣವನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ. ಶಿಕ್ಷಕರ ಈ ಉಪಕ್ರಮವು ವಿದ್ಯಾರ್ಥಿಗಳು ರಚನಾತ್ಮಕ ಚಟುವಟಿಕೆ ಮತ್ತು ಮೌಲ್ಯಮಾಪನಗಳಲ್ಲಿ ಅವರಿಗೆ ನೀಡಿದ ಹಿಮ್ಮಾಹಿತಿಯಿಂದ ಕಲಿಯುವುದನ್ನು ಖಚಿತಪಡಿಸುತ್ತದೆ.

ಶಿಕ್ಷಕರು ಒಂದು ನಿರ್ದಿಷ್ಟ ಕಾರ್ಯದ ಬಗ್ಗೆ ನಿಷ್ಠಾಪೂರ್ವಕವಾದ ಹಿಮ್ಮಾಹಿತಿಯನ್ನು ನೀಡಲು ಬದ್ಧರಾಗಿರಬೇಕು. ಆದಾಗ್ಯೂ, ಹಿಮ್ಮಾಹಿತಿಯ ಪ್ರಮಾಣವು ಖಂಡಿತವಾಗಿಯೂ ಶಿಕ್ಷಕರ ವಿವೇಚನೆಯ ಮೇಲೆ ನಿರ್ಭರವಾಗಿರುತ್ತದೆ. ಹಿಮ್ಮಾಹಿತಿಯ ಗುರು, ಸುಸಾನ್ ಬ್ರೂಕ್‌ಹಾರ್ಟ್ (2008), ಹಿಮ್ಮಾಹಿತಿಯನ್ನು ಒದಗಿಸುವ ಏಕೈಕ 'ಸರಿಯಾದ' ಮಾರ್ಗವೆಂಬುದು ಯಾವುದೂ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಶಿಕ್ಷಕರು 'ಟೂಲ್ ಕಿಟ್' ಅನ್ನು ಅಭಿವೃದ್ಧಿಪಡಿಸುವುದು ಅವಶ್ಯಕ. ಉತ್ತಮ ಗುಣಮಟ್ಟದ ಹಿಮ್ಮಾಹಿತಿಯು ಯಾವಾಗಲೂ ಹೆಚ್ಚು ಉತ್ತೇಜನಕಾರಿಯಾಗಿರುತ್ತದೆ. ಶಿಕ್ಷಕರಾಗಿ ನಾವು ಕಾರ್ಯಕ್ಷಮತೆಯ ಬಗ್ಗೆ ಹಿಮ್ಮಾಹಿತಿಯನ್ನು ನೀಡಲು ಗಮನಹರಿಸಬೇಕು, ವ್ಯಕ್ತಿಯ ಬಗ್ಗೆ ಅಲ್ಲ.

ಉಲ್ಲೇಖಗಳು

Black, P. & William, D. (1998) Assessment in Education: Principles, Policy & Practice, (5) 1, pp 1-75.

Brookhart, S.M. (2008). How to give Effective Feedback to Your Students. Virginia, ASCD.

Brown, S. (2004-2005). The changing nature of assessment. Assessment for Learning. Learning and Teaching in Higher Education, 1, 81-89.

Ferris, D. (1999). The case for Grammar Correction in L2 Writing Classes: A Response to Truscott (1996). Journal of Second Language Writing. 8.1: 1-11.

Hattie, J., & Timperley, H. (2007). The power of Feedback. Review of Educational Research, 77(1), 81-112.

McNamara, T. (2000) Language Testing. Oxford University Press. Oxford. Print.

Swaffield, Sue. (2008) Unlocking Assessment. Understanding for Reflection and Application. New York. Routledge. Print.

ಚಿಂತನಾತ್ಮಕ ಪ್ರಶ್ನೆಗಳು:

1. ಬೋಧನೆಯಲ್ಲಿನ ಎರಡು ಸಮಸ್ಯೆಗಳು ಯಾವುವು?

2. ಬರವಣಿಗೆಯ ಬಗ್ಗೆ ಹಿಮ್ಮಾಹಿತಿ ನೀಡುವಾಗ ಯಾವ ಅಂಶಗಳನ್ನು ಗಮನಿಸಬೇಕು?

**ಡಾ. ಟಿ. ಶ್ರೀಮತಿ ವೆಂಕಟಲಕ್ಷ್ಮಿ,** ಚೆನ್ನೈನ ಗಿಂಡಿ ಕ್ಯಾಂಪಸ್‌ನಲ್ಲಿರುವ ಅಣ್ಣಾ ವಿಶ್ವವಿದ್ಯಾನಿಲಯದ ಕಾಲೇಜ್ ಆಫ್ ಇಂಜಿನಿಯರಿಂಗ್‌ನ ಇಂಗ್ಲಿಷ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಅವರ ಆಸಕ್ತಿದಾಯಕ ಕ್ಷೇತ್ರವೆಂದರೆ, ಪರೀಕ್ಷೆಯ ಕ್ಷೇತ್ರ.
*shrimathy@annauniv.edu*

ಚಂದ್ರೇಯೀ ಸರ್ಕಾರ್ ಮಿತ್ರಾ ಅವರು, ಚೆನ್ನೈನ ಗಿಂಡಿ ಕ್ಯಾಂಪಸ್‌ನಲ್ಲಿರುವ ಅಣ್ಣಾ ವಿಶ್ವವಿದ್ಯಾಲಯದ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಟೀಚಿಂಗ್ ಫೆಲೋ ಆಗಿದ್ದರು. ಪ್ರಸ್ತುತ ಅವರು, ಅಣ್ಣಾ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿನಿಯಾಗಿದ್ದಾರೆ. ಅವರ ಸಂಶೋಧನಾ ಮತ್ತು ಆಸಕ್ತಿಯ ಕ್ಷೇತ್ರಗಳು: ರಚನಾತ್ಮಕ ಮೌಲ್ಯಮಾಪನ ಮತ್ತು ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಕುರಿತು ಶಿಕ್ಷಕರ ಹಿಮ್ಮಾಹಿತಿ
*chandreyeesarkar7@gmail.com*

ಅನುವಾದಕರ ಹೆಸರು: ನಿವೇದಿತ
ಪರಿಶೀಲಕರ ಹೆಸರು: ಟಿ.ಎನ್, ವಾಸುದೇವ ಮೂರ್ತಿ, ಶೈಲಜ ಜಿ.ಪಿ